**ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು ಇವರ ನಡವಳಿಗಳು**

ವಿಷಯ: 2018-19ನೇ ಸಾಲಿನಲ್ಲಿ ಗ್ರಾಮಾಂತರ ಪ್ರದೇಶದಲ್ಲಿ ಪರಿಶಿಷ್ಟ ಜಾತಿ ಜನಾಂಗದವರಿಗಾಗಿ ಸ್ಮಶಾನ ಭೂಮಿ ಖರೀದಿ ಹಾಗೂ ಸ್ಮಶಾನ ಸ್ಥಳದಲ್ಲಿ ಇತರೆ ಸೌಲಭ್ಯಗಳನ್ನು ಒದಗಿಸುವ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಅನುದಾನ ಬಿಡುಗಡೆ ಮಾಡುವ ಕುರಿತು.

ಉಲ್ಲೇಖ:
1. ಸರ್ಕಾರದ ಆದೇಶ ಸಂಖ್ಯೆ: ಸಕಇ 322 ಪವಯೋ 2015 ದಿನಾಂಕ: 19-10-2015.
2. ಸರ್ಕಾರದ ಆದೇಶ ಸಂ: ಸಕಇ-215: ಎಸ್‌ಎಲ್‌ಪಿ-2018, ದಿ:03-11-2018.
3. ಈ ಕಛೇರಿ ಆದೇಶ ಸಂಖ್ಯೆ: ಸಕನಿ: ಸಿಹೆಚ್‌ಬಿ-1: ಸಿಆರ್-15: 2018-19, ದಿನಾಂಕ:05-11-2018.

******

**ಪ್ರಸ್ತಾವನೆ** :

ಗ್ರಾಮಾಂತರ ಪ್ರದೇಶಗಳಲ್ಲಿ ಪರಿಶಿಷ್ಟ ಜಾತಿ ಜನಾಂಗದವರ ಸ್ಮಶಾನಭೂಮಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸುವ ಸಂಬಂಧವಾಗಿ ಉಲ್ಲೇಖ-1ರ ಸರ್ಕಾರದ ಆದೇಶದಲ್ಲಿ ಮಾರ್ಗಸೂಚಿಗಳನ್ನು ರಚಿಸಲಾಗಿರುತ್ತದೆ.

2018-19ನೇ ಸಾಲಿನಲ್ಲಿ ಗ್ರಾಮಾಂತರ ಪ್ರದೇಶದಲ್ಲಿ ಪರಿಶಿಷ್ಟ ಜಾತಿ ಜನಂಗದವರಿಗಾಗಿ ಸ್ಮಶಾನ ಭೂಮಿ ಖರೀದಿ ಹಾಗೂ ಸ್ಮಶಾನದ ಸ್ಥಳದಲ್ಲಿ ಇನ್ನಿತರೆ ಸೌಲಭ್ಯಗಳನ್ನು ಒದಗಿಸುವ ಕಾರ್ಯಕ್ರಮಕ್ಕಾಗಿ ಲೆಕ್ಕ ಶೀರ್ಷಿಕೆ: 4225-01-190-0-06 (132) ರಡಿ ರೂ.500.00 ಲಕ್ಷಗಳನ್ನು ನಿಗಧಿಪಡಿಸಿ ಮೊದಲನೇ ಕಂತಾಗಿ ರೂ.200.00 ಲಕ್ಷಗಳನ್ನು ಉಲ್ಲೇಖ-2ರಲ್ಲಿ ಬಿಡುಗಡೆ ಮಾಡಲಾಗಿರುತ್ತದೆ.

ಮೇಲ್ಕಂಡಂತೆ ಬಿಡುಗಡೆ ಮಾಡಲಾದ ರೂ.200.00 ಲಕ್ಷಗಳನ್ನು ಉಲ್ಲೇಖ-3ರಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಡಾ: ಬಿ. ಆರ್. ಅಂಬೇಡ್ಕರ್ ಅಭಿವೃದ್ಧಿ ನಿಯಮ ನಿಗಮಿತ, ಬೆಂಗಳೂರು ರವರಿಗೆ ಮರು ಬಿಡುಗಡೆ ಮಾಡಲಾಗಿರುತ್ತದೆ.

ಸದರಿ ಕಾರ್ಯಕ್ರಮದ ಅನುಷ್ಠಾನ ಸಂಬಂಧವಾಗಿ, 2015-16ನೇ ಸಾಲಿನಲ್ಲಿ ಜಿಲ್ಲೆಗಳಿಗೆ ಅನುದಾನ ಹಂಚಿಕೆ ಮಾಡಿ ಬಿಡುಗಡೆ ಮಾಡಲಾಗಿದ್ದು, ಸದರಿ ಅನುದಾನವನ್ನು ಪೂರ್ಣ ಪ್ರಮಾಣದಲ್ಲಿ ವೆಚ್ಚ ಮಾಡಲಾಗಿರುವ ಬೆಂಗಳೂರು ನಗರ, ದಾವಣಗೆರೆ, ಚಿಕ್ಕಬಳ್ಳಾಪುರ, ಶಿವಮೊಗ್ಗ, ಮೈಸೂರು, ಚಾಮರಾಜನಗರ, ಮಂಡ್ಯ, ಚಿಕ್ಕಮಗಳೂರು, ಕೊಡಗು, ಬೆಳಗಾವಿ, ಗದಗ ಮತ್ತು ವಿಜಯಪುರ ಜಿಲ್ಲೆಗಳಿಗೆ ಮೇಲ್ಕಂಡಂತೆ ಬಿಡುಗಡೆ ಮಾಡಲಾಗಿರುವ ರೂ.200.00 ಲಕ್ಷಗಳನ್ನು ಹಂಚಿಕೆ ಮಾಡಿ ಬಿಡುಗಡೆ ಮಾಡಲು ಉದ್ದೇಶಿಸಿರುವುದರಿಂದ ಈ ಕೆಳಕಂಡ ಆದೇಶ.

Scanned by CamScanner

ಸಂಖ್ಯೆ: ಸಕನಿ/ಸ್ಮ.ಭೂ/ಸಿಆರ್-11/2018-19 ದಿನಾಂಕ:04-01-2019.

**ಆದೇಶ**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳನ್ನು ಅನುಸರಿಸಿ, 2018-19ನೇ ಸಾಲಿನಲ್ಲಿ ಗ್ರಾಮಾಂತರ ಪ್ರದೇಶದಲ್ಲಿ ಪರಿಶಿಷ್ಟ ಜಾತಿ ಜನಾಂಗದವರಿಗಾಗಿ ಸ್ಮಶಾನ ಭೂಮಿ ಖರೀದಿ ಹಾಗೂ ಸ್ಮಶಾನ ಸ್ಥಳದಲ್ಲಿ ಇತರೆ ಸೌಲಭ್ಯಗಳನ್ನು ಒದಗಿಸುವ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಒದಗಿಸಿರುವ ರೂ.200.00 ಲಕ್ಷಗಳನ್ನು ಸಂಬಂಧಪಟ್ಟ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ಅಗತ್ಯ ಷರತ್ತುಗಳಿಗೆ ಒಳಪಡಿಸಿ ಈ ಕೆಳಕಂಡಂತೆ ಬಿಡುಗಡೆ ಮಾಡಿ ಆದೇಶಿಸಿದೆ.

ರೂ.ಲಕ್ಷಗಳಲ್ಲಿ

| ಕ್ರ. ಸಂ | ಜಿಲ್ಲೆ | ಹಂಚಿಕೆ ಮಾಡಲಾದ ಅನುದಾನ | ಬಿಡುಗಡೆ ಮಾಡಲಾದ ಅನುದಾನ |
|---|---|---|---|
| 1. | ಬೆಂಗಳೂರು ನಗರ | 25.00 | 25.00 |
| 2. | ದಾವಣಗೆರೆ | 5.00 | 5.00 |
| 3. | ಚಿಕ್ಕಬಳ್ಳಾಪುರ | 25.00 | 25.00 |
| 4. | ಶಿವಮೊಗ್ಗ | 25.00 | 25.00 |
| 5. | ಮೈಸೂರು | 20.0 | 20.0 |
| 6. | ಚಾಮರಾಜನಗರ | 10.00 | 10.00 |
| 7. | ಮಂಡ್ಯ | 20.00 | 20.00 |
| 8. | ಚಿಕ್ಕಮಗಳೂರು | 15.00 | 15.00 |
| 9. | ಕೊಡಗು | 10.00 | 10.00 |
| 10. | ಬೆಳಗಾವಿ | 15.00 | 15.00 |
| 11. | ಗದಗ | 10.00 | 10.00 |
| 12. | ವಿಜಯಪುರ | 20.00 | 20.00 |
| | **ಒಟ್ಟು** | **200.00** | **200.00** |

**ಷರತ್ತುಗಳು:**

1. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ರನ್ವಯ ಕಾಮಗಾರಿಗಳನ್ನು ಕೈಗೊಳ್ಳುವುದು.

Scanned by CamScanner

2. ಮೇಲ್ಕಂಡಂತೆ ಬಿಡುಗಡೆ ಮಾಡಲಾಗಿರುವ ಅನುದಾನದಲ್ಲಿ ಸಂಬಂಧಪಟ್ಟ ಜಿಲ್ಲೆಗಳ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಕಾಮಗಾರಿಗಳನ್ನು ಆಯ್ಕೆ ಮಾಡಿ. ಈ ಸಂಬಂಧವಾಗಿ ಸರ್ಕಾರಿ ನಿರ್ಮಾಣ ಏಜೆನ್ಸಿಗಳ ವತಿಯಿಂದ ಸಿದ್ಧಪಡಿಸಲಾಗಿರುವ ಅಂದಾಜು ಪಟ್ಟಿಗಳಿಗೆ ಜಿಲ್ಲಾಧಿಕಾರಿಗಳಿಗೆ ಪ್ರದ್ದತ್ತವಾಗಿರುವ ಆರ್ಥಿಕ ಅಧಿಕಾರದನ್ವಯ ಆಡಳಿತಾತ್ಮಕ ಅನುಮೋದನೆ ಪಡೆದು ಕಾಮಗಾರಿಗಳನ್ನು ಕೈಗೊಳ್ಳತಕ್ಕದ್ದು.
3. ಹಂಚಿಕೆ ಮಾಡಿ ಬಿಡುಗಡೆ ಮಾಡಿರುವ ಮೊತ್ತದ ಕಾಮಗಾರಿಯನ್ನು ಕೈಗೊಂಡು ಪೂರ್ಣಗೊಳಿಸತಕ್ಕದ್ದು.
4. ಪ್ರಸ್ತಾಪಿತ ಸ್ಮಶಾನ ಭೂಮಿ ಪರಿಶಿಷ್ಟ ಜಾತಿ ಜನಾಂಗದವರಿಗೆ ಮೀಸಲಿರಿಸಿರುವ ಸ್ಮಶಾನ ಭೂಮಿಯೇ ಎಂದು ಖಾತ್ರಿ ಪಡಿಸುವುದು ಸಂಬಂಧಪಟ್ಟ ಜಿಲ್ಲೆಗಳಲ್ಲಿನ ಸಮಾಜ ಕಲ್ಯಾಣ ಇಲಾಖೆ ಜಂಟಿ/ಉಪ ನಿರ್ದೇಶಕರುಗಳ ಜವಾಬ್ದಾರಿಯಾಗಿರುತ್ತದೆ.
5. ಪ್ರಸ್ತಾಪಿತ ಸ್ಮಶಾನ ಭೂಮಿಯ ಕಂದಾಯ ದಾಖಲೆಗಳನ್ನು ಪಡೆಯುವುದು ಅನುದಾನವನ್ನು ಬಿಡುಗಡೆ ಮಾಡುವುದು.
6. ಸರ್ಕಾರದ ಸುತ್ತೋಲೆ ಸಂಖ್ಯೆ: ಸಕಇ 456 ಮೊದೇಶಾ 2018 ದಿನಾಂಕ: 10-08-2018 ರನ್ವಯ ಕಾಮಗಾರಿಗಳನ್ನು ಕೆ.ಆರ್.ಐ.ಡಿ.ಎಲ್ ಹಾಗೂ ನಿರ್ಮಿತಿ ಕೇಂದ್ರಗಳಿಗೆ ವಹಿಸದೇ ನಿಯಮಾನುಸಾರ ಟೆಂಡರ್ ಕರೆದು ಕೈಗೊಳ್ಳುವುದು.

**ಮೇಲ್ಕಂಡಂತೆ ಬಿಡುಗಡೆಗೊಳಿಸಲಾಗಿರುವ ರೂ.200.00 ಲಕ್ಷಗಳನ್ನು ಸಂಬಂಧಪಟ್ಟ ಜಿಲ್ಲೆಗಳ ಜಿಲ್ಲಾಧಿಕಾರಿಗಳು ಮತ್ತು ಜಂಟಿ/ಉಪ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ ರವರುಗಳ ಜಂಟಿ ಖಾತೆಗೆ ಆರ್.ಟಿ.ಜಿ.ಎಸ್ ಮುಖಾಂತರ ವರ್ಗಾಹಿಸಲು ವ್ಯವಸ್ಥಾಪಕ ನಿರ್ದೇಶಕರು, ಡಾ॥ ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ, ಬೆಂಗಳೂರು ರವರಿಗೆ ಆದೇಶಿಸಿದೆ.**

(ರೂ. ಲಕ್ಷಗಳಲ್ಲಿ)

| SL. NO | DISTRICT NAME | BANK | BRANCH | ACCOUNT NO. | IFSC CODE | ವರ್ಗಾವಣೆ ಮಾಡುತ್ತಿರುವ ಅನುದಾನ |
|---|---|---|---|---|---|---|
| 1. | BANGALORE RURAL | SBM | Dr. B.R. Ambedkar veedhi | 64089370223 | SBMY0040022 | 25.00 |
| 2. | DAVANAGERE | SBM | DAVANAGERE | 64089370574 | SBMY0040361 | 5.00 |
| 3. | CHIKKBALLAPUR | SBM | CHIKKABALLAPUR | 64089370449 | SBMY0040082 | 25.00 |
| 4. | SHIVMOGA | SBM | SHIMOGA | 64089371103 | SBMY0040132 | 25.00 |
| 5. | MYSORE | SBM | MYSORE | 64089370982 | SBMY0040054 | 20.0 |
| 6. | CHAMARAJNAGARA | SBM | CHAMARAJNAGAR | 64089370405 | SBMY0040062 | 10.00 |
| 7. | MANDYA | SBM | MANDYA | 64089370948 | SBMY0040035 | 20.00 |
| 8. | CHIKMANGALORE | SBM | CHIKMAGALORE | 64089370483 | SBMY0040143 | 15.00 |
| 9. | KODAGU | SBM | MADIKERI | 64089370824 | SBMY0040329 | 10.00 |

Scanned by CamScanner

| | | | | | | |
|---|---|---|---|---|---|---|
| 10. | BELAGAUM | SBM | MALMURTHI | 64089370303 | SBMY0040419 | 15.00 |
| 11. | GADAG | SBM | GADAG | 64089370620 | SBMY0040220 | 10.00 |
| 12. | BIJAPUR | SBM | BIJAPUR | 64089370369 | SBMY0040300 | 20.00 |
| ಒಟ್ಟು ರೂ.ಇನ್ನೂರು ಲಕ್ಷಗಳು ಮಾತ್ರ | | | | | | 200.00 |

ಈ ಸಂಬಂಧದ ವೆಚ್ಚವನ್ನು 2018-19ನೇ ಸಾಲಿನ ಲೆಕ್ಕಶೀರ್ಷಿಕೆ: 4225-01-190-0-06 (132) ರಡಿ ಪರಿಶಿಷ್ಟ ಜಾತಿಯವರ ಸ್ಮಶಾನ ಭೂಮಿ ಅಭಿವೃದ್ಧಿ ಕಾರ್ಯಕ್ರಮಕ್ಕಾಗಿ ಬಿಡುಗಡೆ ಮಾಡಿರುವ ರೂ.200.00 ಲಕ್ಷಗಳಲ್ಲಿ ಅನುದಾನದಲ್ಲಿ ಭರಿಸತಕ್ಕದ್ದು.

ತಮ್ಮ ನಂಬುಗೆಯ,

10.1.19

ಆಯುಕ್ತರು,
ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು.

4/1/19

**ಪ್ರತಿಯನ್ನು:-**

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು.
3. ಜಿಲ್ಲಾಧಿಕಾರಿಗಳು ಬೆಂಗಳೂರು ನಗರ, ದಾವಣಗೆರೆ, ಚಿಕ್ಕಬಳ್ಳಾಪುರ, ಶಿವಮೊಗ್ಗ, ಮೈಸೂರು, ಚಾಮರಾಜನಗರ, ಮಂಡ್ಯ, ಚಿಕ್ಕಮಗಳೂರು, ಕೊಡಗು, ಬೆಳಗಾವಿ, ಗದಗ ಮತ್ತು ವಿಜಯಪುರ ಜಿಲ್ಲೆಗಳು.
4. ಜಂಟಿ/ಉಪ ನಿರ್ದೇಶಕರು, ಬೆಂಗಳೂರು ನಗರ, ದಾವಣಗೆರೆ, ಚಿಕ್ಕಬಳ್ಳಾಪುರ, ಶಿವಮೊಗ್ಗ, ಮೈಸೂರು, ಚಾಮರಾಜನಗರ, ಮಂಡ್ಯ, ಚಿಕ್ಕಮಗಳೂರು, ಕೊಡಗು, ಬೆಳಗಾವಿ, ಗದಗ ಮತ್ತು ವಿಜಯಪುರ ಜಿಲ್ಲೆಗಳು.
5. ವ್ಯವಸ್ಥಾಪಕ ನಿರ್ದೇಶಕರು, ಡಾ|| ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ, ಬೆಂಗಳೂರು.
6. ಮುಖ್ಯ ಲೆಕ್ಕಾಧಿಕಾರಿಗಳು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು.
7. ಕಛೇರಿ ಪ್ರತಿ.

Scanned by CamScanner